ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 87-92
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗೊರೂರರ 'ಹೇಮಾವತಿ' ಒಂದು ಅನಾವರಣ

**ಡಾ. ಅಮೃತಾಕ್ಷಿ ಜಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ದಾಸರಹಳ್ಳಿ, ಬೆಂಗಳೂರು

***Abstract:***
*ಈ ಸಂಶೋಧನಾ ಲೇಖನವು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಹೇಮಾವತಿ' ಕಾದಂಬರಿಯು ಸಾಹಿತ್ಯಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಅನಾವರಣಗೊಳಿಸುವ ಪ್ರಯತ್ನವಾಗಿದೆ. ಕೃತಿಯಲ್ಲಿ ಗ್ರಾಮೀಣ ಬದುಕು, ಮಾನವ ಸಂಬಂಧಗಳು, ಸಾಮಾಜಿಕ ಮೌಲ್ಯಗಳು ಮತ್ತು ಅಂದಿನ ಜೀವನಕ್ರಮಗಳು ಹೇಗೆ ಪ್ರತಿಬಿಂಬಿತವಾಗಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. 'ಹೇಮಾವತಿ'ಯ ಪಾತ್ರಚಿತ್ರಣ, ಕಥನಶೈಲಿ ಮತ್ತು ಭಾಷಾ ವೈಶಿಷ್ಟ್ಯಗಳು ಕೃತಿಯ ಸಾಹಿತ್ಯಿಕ ಮಹತ್ವವನ್ನು ರೂಪಿಸುವ ರೀತಿಯನ್ನು ಇಲ್ಲಿ ಪರಿಶೀಲಿಸಲಾಗಿದೆ. ಕೃತಿಯ ಮೂಲಕ ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧ, ಸಂಘರ್ಷ ಹಾಗೂ ಸಾಮಾಜಿಕ ಪರಿವರ್ತನೆಯ ಆಶಯಗಳು ವ್ಯಕ್ತವಾಗುವ ಬಗೆಯನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ, 'ಹೇಮಾವತಿ' ಕೃತಿಯು ಗ್ರಾಮೀಣ ಸಮಾಜದ ಜೀವನಾನುಭವಗಳನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸುವ ಮಹತ್ವದ ಕೃತಿಯಾಗಿದೆ ಎಂಬುದನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ.*

***Keywords:*** *ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹೇಮಾವತಿ, ಗ್ರಾಮೀಣ ಜೀವನ, ಸಾಮಾಜಿಕ ಸಂಬಂಧಗಳು, ಕನ್ನಡ ಸಾಹಿತ್ಯ.*

## ಪೀಠಿಕೆ

ಹಿಂದಿನ ಕಾಲದಲ್ಲಿದ್ದ ಪ್ರಾದೇಶಿಕ ಸಾಹಿತ್ಯದ ನೆಲೆಗಟ್ಟು ಇಂದು ಕಣ್ಮರೆಯಾಗುತ್ತಿದೆ. ಇದರಿಂದ ನಮ್ಮ ಗ್ರಾಮಗಳು ಗತಿಬಿಂಬದಂತೆ ಭಾಸವಾಗುತ್ತವೆ. ಸಾಹಿತಿಗಳು ತಮ್ಮ ಊರು, ಅಲ್ಲಿನ ಜನತೆ, ಸುತ್ತಲಿನ ಪರಿಸರದೊಂದಿಗೆ ಅಭಿನ್ನತೆ ಸಾಧಿಸಿರುವವರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಒಬ್ಬರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ–ವಿಸ್ತಾರಗಳನ್ನು, ವೈವಿಧ್ಯ–ವೈಶಿಷ್ಟ್ಯಗಳನ್ನು ತಂದುಕೊಟ್ಟ ಗದ್ಯ ಲೇಖಕರು. ನಮ್ಮ ಸಾಹಿತ್ಯಕ್ಕೆ ಅವರು ಸೇರಿಸಿರುವ ಪ್ರಾದೇಶಿಕ ದನಿ, ಬಣ್ಣಗಳು ಸಾಹಿತ್ಯ ಚರಿತ್ರೆಯಲ್ಲಿ ಪ್ರತ್ಯೇಕವಾಗಿ ನೋಡಲು ಅರ್ಹವಾಗಿವೆ. ಒಂದು ಪ್ರಾದೇಶಿಕ ಜೀವನದ ಸುಖ ದುಃಖಗಳನ್ನು ಅನೇಕ ರೀತಿಯಲ್ಲಿ ಅನುಭವವಾಗಿಸಿದ ನಿಪುಣ ಕಲಾವಿದರು.

ನಮ್ಮ ಹಳ್ಳಿಯ ಜನ ಜೀವನವನ್ನು ಕುರಿತಂತೆ ಮೊದಲಬಾರಿಗೆ ನಮ್ಮ ಸಾಹಿತ್ಯಕ್ಕೆ ಹೊಸ ಪ್ರಕಾರವೊಂದನ್ನು ಸೇರಿಸಿದ ಕೀರ್ತಿಗೆ ಗೊರೂರರು ಪ್ರಮುಖರು. ಕಥೆ, ಕಾದಂಬರಿ, ಪ್ರಬಂಧ, ಜೀವನ–ಚರಿತ್ರೆ, ವಿಚಾರ ಸಾಹಿತ್ಯ, ಅನುವಾದ ಮೊದಲಾದ ನಾನಾ ಪ್ರಕಾರಗಳಲ್ಲಿ ಗೊರೂರರು ಸತ್ವಪೂರ್ಣವಾದ ಕೃತಿಗಳನ್ನು ರಚಿಸಿದ್ದಾರೆ. ಗೊರೂರರ ಕೃತಿಗಳು ಒಂದು ಕಾಲದ ಜೀವನ ವಿಧಾನ ಹಾಗೂ ಅಲ್ಲಿಯ

***Please cite this article as:*** ಅಮೃತಾಕ್ಷಿ, ಜಿ. (2026). ಗೊರೂರರ 'ಹೇಮಾವತಿ' ಒಂದು ಅನಾವರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 5(3), 87–92

ಪರಿಸರವನ್ನು ಕಟ್ಟಿಕೊಡುವ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ದಾಖಲೆಗಳಾಗಿವೆ. ಕನ್ನಡ ನವೋದಯ ಸಾಹಿತ್ಯದಲ್ಲಿ ಇವರ ಕೃತಿಗಳು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಮುಖ್ಯವಾಗಿ ಗ್ರಾಮೀಣ ಸಮಾಜವನ್ನು ಉದ್ಧರಿಸುವ ಉದ್ದೇಶವನ್ನು ಮತ್ತು ಗಾಂಧೀಜಿಯವರ ಗ್ರಾಮಸ್ವರಾಜ್ಯ ಸ್ಥಾಪನೆಯ ಆಶಯವನ್ನು ಗೊರೂರರು ತಮ್ಮ ಕಾದಂಬರಿಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಗೊರೂರರು ಕಾದಂಬರಿಯಲ್ಲಿ ಬರುವ ಪಾತ್ರಗಳನ್ನು ಯಾಂತ್ರಿಕವಾಗಿ ಸೃಷ್ಟಿಸದೆ ಮಧ್ಯೆ ಮಧ್ಯೆ ತಾವು ಇಣುಕಿ ನೋಡಿ ಪಾತ್ರವಾಗುವುದನ್ನು ಗಮನಿಸಬಹುದು. ಗೊರೂರರ ಸಾಹಿತ್ಯ ನಿರಾಭರಣ ಸುಂದರಿಯಂತೆ ಚೆನ್ನಾಗಿ ಓದಿಸಿಕೊಂಡು ಹೋಗುತ್ತವೆ. ಅವರ 'ಹೇಮಾವತಿ' ಕಾದಂಬರಿಯನ್ನು ನೋಡುವುದಾದರೆ ಹೇಮಾವತಿ ನದಿಗೂ, 'ಹೇಮಾವತಿ' ಕಾದಂಬರಿಗೂ ಯಾವ ಸಂಬಂಧವೂ ಇಲ್ಲ. 'ಹೇಮಾವತಿ' ಕಾದಂಬರಿಯ ಒಂದು ಪಾತ್ರ. ಆ ಪಾತ್ರದ ಮೂಲಕ ಹೆಣ್ಣಿನ ಜೀವನವನ್ನು, ಜೀವನದ ನೋವುಗಳನ್ನು ಹೆಣ್ಣಿನ ಸ್ಥಿತಿಗತಿಗಳನ್ನು, ಸಮಾಜಕ್ಕೆ ಸಾರುತ್ತಾರೆ. ಹೇಮಾವತಿ ಕಾದಂಬರಿ ಇದು ಗೊರೂರರ (1948) ಮೂರನೆಯ ಕಾದಂಬರಿ. ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರವೊಂದರ ಹೆಸರನ್ನು ಇದರ ಶೀರ್ಷಿಕೆಯಾಗಿ ಇರಿಸಲಾಗಿದೆ. ಈ ಹೇಮಾವತಿ ಕಾವೇರಿ ಅಗ್ರಹಾರದ ರಾಮಣ್ಣ ಪೆರುಮಾಳರ ಮಗಳು. ಅವಳ ಜೀನವದ ಏಳು–ಬೀಳುಗಳನ್ನು ಚಿತ್ರಿಸುವುದೇ ಈ ಕಾದಂಬರಿಯ ಆಶಯ. ಹೇಮಾವತಿ ಜೀವನದಲ್ಲಾಗುವ ಏರು–ಪೇರುಗಳಿಗೆ ಅವಳ ತಾಯಿ, ತಂದೆ, ಗಂಡ–ಅತ್ತೆ–ಮಾವ, ಸಂಪ್ರದಾಯದ ಆಚರಣೆಗಳು ಎಷ್ಟರ ಮಟ್ಟಿಗೆ ಕಾರಣವಾಗುತ್ತವೆ ಎಂಬುದನ್ನು ವೈದೃಶ್ಯಾತ್ಮಕವಾಗಿ ಇಲ್ಲಿ ಚಿತ್ರಿಸಲಾಗಿದೆ.

ಕಾದಂಬರಿಯ ಹೆಸರು ಹೇಳುವಂತೆ ಇದು ಹೇಮಾವತಿಯ ಕಥೆ ಹೇಮಾವತಿ ನದಿ ತೀರದ ಜನರ ಕಥೆ ಲೇಖಕರು ಹೇಮಾವತಿಯ ಕಥೆ ಹೇಳುತ್ತಲೇ ಬದಲಾವಣೆಗೆ ಒಡ್ಡಿಕೊಳ್ಳುತ್ತಿರುವ ಗ್ರಾಮಭಾರತದ ಕಥೆಯನ್ನು ಸಹ ಹೇಳುತ್ತಿದ್ದಾರೆ. ಹೇಮಾವತಿಯ ಬದುಕಿನಲ್ಲಿ ಕಾಣುವ ಒಂದು ಬಗೆಯ ಪ್ರಣಯ, ಪ್ರಗತಿ, ಕಾದಂಬರಿಯ ಚೌಕಟ್ಟಿನಲ್ಲಿ ಗೋಚರವಾಗುತ್ತದೆ. ಸಾಂಪ್ರದಾಯಿಕ ಪಾತ್ರ ಹಾಗೂ ಹೊಣೆಗಳಿಗಿಂತ ಭಿನ್ನವಾದ ಬಗೆಯಲ್ಲಿ ಇಲ್ಲಿನ ಹೆಣ್ಣುಗಳು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಾರೆ.

ಕೌಟುಂಬಿಕ ಆವರಣದಿಂದ ಆಚೆಗೆ ಹೆಣ್ಣಿಗೆ ಒಂದು ಸಾಮಾಜಿಕ ಅಸ್ತಿತ್ವ ಇದೆ ಎಂಬುದನ್ನು, ಸಂಪ್ರದಾಯಕ್ಕೆ ಕಟ್ಟುಬಿದ್ದು ಒಲ್ಲದ ಮದುವೆಗಳು ಸುಖ ಸಾಧನವಾಗಿ ಹೆಣ್ಣನ್ನು ನೋಡುವ ಲಂಪಟ ಮನಸ್ಸುಗಳು, ದುರಾಸೆಗೆ ಸಿಕ್ಕಿ ಸುಖವನ್ನು ದೂರತಳ್ಳುವ ಮನಸ್ಥಿತಿ ಈ ಕಾದಂಬರಿಯಲ್ಲಿ ಕಾಣಬಹುದು. ದೇಶವನ್ನು ಹೆಣ್ಣೆಂದು ಭಾವಿಸುವ ನಮ್ಮ ಸಮಾಜದಲ್ಲಿ ನೆಲದ ವಿಮೋಚನೆಯ ಪ್ರಶ್ನೆ ಸ್ತ್ರೀ ವಿಮೋಚನೆಯ ಪ್ರಶ್ನೆಯೊಂದಿಗೆ ಬೆಸೆದುಕೊಂಡಿರುವ ಬಗ್ಗೆ ಕುತೂಹಲಕಾರಿಯಾದದ್ದು.

ರಾಮಣ್ಣ ಪೆರುಮಾಳರ ಮಗಳು ಹೇಮಾವತಿ ತಾಯಿಲ್ಲದ ತಬ್ಬಲಿಯಾಗಿ ಅನೇಕ ಕಷ್ಟಗಳನ್ನು ಬಾಲ್ಯದಿಂದಲೇ ಅನುಭವಿಸುತ್ತಾಳೆ. ಹೇಮಾವತಿಯನ್ನು ಸುಬ್ಬಾಭಟ್ಟರ ಮಗ ವಾಸುವಿಗೆ ಕೊಟ್ಟು ಮದುವೆ ಮಾಡುವ ಪ್ರಸ್ತಾಪಕ್ಕೆ ಅವರ ವೀರಮಾಧ್ವತ್ವ ಅಡ್ಡಿಯನ್ನೊಡ್ಡುತ್ತದೆ; ಶಠಾರಿಯವರ ಮಗ ಸುಂದರನನ್ನು ಮದುವೆಯಾಗುವ ಸಂದರ್ಭದಲ್ಲಿನ ಒತ್ತಡದ ಅನಾವಶ್ಯಕ ವೆಚ್ಚಗಳಿಂದ ಅವಳ ತಂದೆ ಬರಿಗೈಯವರಾಗಿರುತ್ತಾರೆ. ಗಂಡನ ಶುದ್ಧ ಪ್ರೀತಿಯೂ ದೊರೆಯುವುದಿಲ್ಲ. ವರದಕ್ಷಿಣೆ ಇತ್ಯಾದಿ ರೂಪದಲ್ಲಿ ಪಡೆದ ಹಣವನ್ನು ಯಾವ ಯಾವುದೋ ದಂಧೆಗಳಲ್ಲಿ ತೊಡಗಿಸಿ, ಅವನು ವಿಫಲನಾಗುತ್ತಾನೆ. ಅವಳ ಸೌಂದರ್ಯ ಹಾಗೂ ಹಾಡುಗಾರಿಕೆಯನ್ನು ಮೆಚ್ಚದಿರಲೂ ಅವನ ಸುಲಿಗೆ–ವೈಫಲ್ಯಗಳೇ ಕಾರಣವಾಗುತ್ತದೆ. ಅತ್ತೆ ಮಾವಂದಿರ ಪ್ರೀತಿ–ವಿಶ್ವಾಸಗಳೂ ಅವಳಿಗೆ ದೊರೆಯುವುದಿಲ್ಲ. ದಂಡಿನ

ಹುಡುಗಿಯ ಸ್ನೇಹಕ್ಕೆ ಬಲಿಯಾದ ಗಂಡನನ್ನು ತ್ಯಜಿಸಿ ಬಂದು, ತನ್ನ ಊರಿನಲ್ಲಿಯೇ ಜೀತದ ಆಳಾಗಿ ದುಡಿಯತೊಡಗುತ್ತಾಳೆ. ಬರಿಗೈಯವನಾಗಿ ಬೇರೆ ದಾರಿಯಿಲ್ಲದ ಅವಳ ಗಂಡನಾದ ಸುಂದರ, ಸೈನ್ಯಕ್ಕೆ ಸೇರಿಕೊಂಡು ಬಿಡುತ್ತಾನೆ. ಇಲ್ಲಿಯೂ ಸಮಾಜ ಅವಳನ್ನು ನಿಷ್ಕರುಣೆಯಿಂದ ಕೆಣಕಿ, ಕುಟುಕಿ, ಚುಚ್ಚಿ ಗೋಳುಹುಯ್ದುಕೊಳ್ಳುತ್ತದೆ ಎಂಬುದನ್ನು ಗುರುತಿಸಬಹುದು.

ಇತ್ತ ಸುಬ್ಬಾಭಟ್ಟರ ಮಗ ವಾಸು ಗಾನಶಾರದೆಯಾಗಿ ಬೆಳೆದುನಿಂತಿದ್ದ ಅಸ್ಪೃಶ್ಯ ವರ್ಗಕ್ಕೆ ಸೇರಿದ ಚೆನ್ನಿಯನ್ನು ಮದುವೆಯಾಗಲು ನಿಶ್ಚಯಿಸಿದನು. ಇದರಿಂದ ಅವನ ತಂದೆಯ ಧರ್ಮಾಂಧತೆಗೆ ಆಘಾತವುಂಟಾಯಿತು. ಹೇಮಾವತಿಯನ್ನು ಶ್ರೀವೈಷ್ಣವಳೆಂಬ ಕಾರಣಕ್ಕೆ ನಿರಾಕರಿಸಿದ್ದ ಅವರ ಈಗಿನ ಮನುಕುಲ ಸ್ಥಿತಿಯನ್ನು ಗೊರೂರರು ಅಚ್ಚರಿಯೆನ್ನಿಸುವಷ್ಟು ಸಹಜವಾಗಿ ಚಿತ್ರಿಸಿದ್ದಾರೆ.

**"ಹೊಲೆಯರ ಕಾಳ ನನ್ನ ಬೀಗ, ಭೇಷ್..ಭೇಷ್...ನನ್ನ ಮನೆಯ ಸತ್ತದನಗಳನ್ನೆಲ್ಲಾ ತಿಂದವನು ಕಾಳನೇ. ಈ ಗಾನಶಾರದೆಯೂ ತಿಂದಿದ್ದಿರಬೇಕು. ಇವಳನ್ನು ಮದುವೆಯಾಗುವವನು 'ಕಶ್ಯಪ; ಕಾಶ್ಯಪ... ಸಪ್ತಾರ್ಷ' ಪ್ರವರಾನ್ವಿತನಾದ ಅಗ್ರಹಾರದ ಪುರೋಹಿತ ಸುಬ್ಬರಾಯಭಟ್ಟರ ವಾಸು. ಆದರೆ ಗಾನಶಾರದೆಗೆ ಯಾವ ಪ್ರವರ ಹೇಳುತ್ತೀರಿ... ಕಾಳನ ಅಪ್ಪ ಕಾಳ, ಅವನಪ್ಪಕಾಳ, ಅವನಪ್ಪಕಾಳ;** ಸಮಾಜ ಸುಧಾರಣೆಯಂತೆ ಸುಧಾರಣೆ ಹೇಮಾವತಿಯನ್ನು ಮದುವೆಯಾಗುತ್ತೇನೆ ಎನ್ನತ್ತಾನೆ. ಅವರು ಐಯಂಗಾರ್ರು, ಬೇಡ ಎಂದೆ, ಈಗ ಹೊಲತಿಯನ್ನು ಮದುವೆಯಾಗುತ್ತೇನೆ ಎನ್ನುತ್ತಾನೆ ಕಲಿಯುಗ ಪ್ರಾರಂಭವಾಗಿದೆ ಎನ್ನುತ್ತಾರೆ. ಈ ವ್ಯವಸ್ಥೆ ಪರ್ಯಾಯವಾಗಿ ಸಮಾಜ ಸುಧಾರಣೆಯ ವಿಚಾರವನ್ನು ಕೈಗೆತ್ತಿಕೊಳ್ಳುವ ಗೊರೂರರು ನೈರ್ಮಲ್ಯ, ಆರೋಗ್ಯ, ವಿದ್ಯೆ, ಕಲೆಗಳ ಮೂಲಕ ಅವರನ್ನು ಸುಧಾರಿಸಿ ಅಂತರ್ಜಾತೀಯ ವಿವಾಹಗಳ ಮೂಲಕ ಜಾತಿಭೇದಗಳನ್ನು ತೊಡೆದು ಹಾಕಬೇಕು ಎಂಬುದನ್ನು ಗಮನಿಸಬಹುದು.

ಗಾನಶಾರದೆಯನ್ನು ವಿವಾಹವಾಗದಿದ್ದರೆ ಬಾಳುವುದಕ್ಕೆ ಆಗುವುದಿಲ್ಲ ಎಂದು ತೋರಿದರೆ ವಿವಾಹವಾಗು... ಗಾನ ಶಾರದೆಯ ರೂಪ ಲಾವಣ್ಯ ಗಾನಮಾಧುರ್ಯ ಈಗ ನಿನ್ನನ್ನು ಆಕರ್ಷಿಸಿರಬಹುದು. **"ಇವೆಲ್ಲ ಕ್ಷಣಿಕವಾದ ದೈಹಿಕ ಆಕರ್ಷಣೆಯೇ ಹೊರತು ಆತ್ಮದ ಆಕರ್ಷಣೆಯಲ್ಲ... ವಿವಾಹ ನನ್ನ ಪ್ರಶ್ನೆ ಎಂಬುದು ಈಚೆಗೆ ಹೊಸ ನಾಗರೀಕತೆ ಕಲಿಸಿರುವ ಗಿಣಿ ಪಾಠ ನಿಮ್ಮ ತಂದೆಯವರಿಗೆ ವಿವಾಹ ಇನ್ನೂ ಮನೆತನದ ಪ್ರಶ್ನೆ... ಕಾಳನ ಮಗಳನ್ನು ನಿಮ್ಮ ತಾಯಿ ಸೊಸೆಯಾಗಿ ಸ್ವೀಕರಿಸಿ ಮನೆಗೆ ಸೇರಿಸುವಳೇ..."** ಎನ್ನುವುದರಲ್ಲಿ ಜಾತಿ, ಧರ್ಮದ ಅಸಮಾನತೆ ಎದ್ದು ಕಾಣಿಸುತ್ತವೆ.

ಭಾರತದಲ್ಲಿ ಗ್ರಾಮೋದ್ಧಾರ ಪ್ರಧಾನ ಉದ್ದೇಶವಾದರೂ ಹಳ್ಳಿಗಳು ಸಾಮರಸ್ಯದ ನೆಲೆಗಳಾಗಿರಲಿಲ್ಲ, ಜಾತಿಗಳ ರೂಪವಾಗಿದ್ದ ಹಳ್ಳಿಗಳಲ್ಲಿ ಒಳ್ಳೆಯ ಸಂಗತಿಗಳು ಎಷ್ಟಿದ್ದರೂ ಅವು ಸಂಘರ್ಷದಲ್ಲಿ ಮುಸುಕಾಗಿ ಹೋಗಿದ್ದವು. ಈ ದಿನ ಜಾತಿಗಳು ಮಾತ್ರವಲ್ಲ ಜಾತಿಗಳೊಳಗೆ ಉಪಜಾತಿಗಳ ನಡುವೆ ಮೇಲರಿಮೆಗಾಗಿ ಗುದ್ದಾಟ, ಒಟ್ಟು ಸಮುದಾಯದ ಸತ್ವವನ್ನೇ ಹೊಸಕಿಹಾಕುವ ಮಟ್ಟದಲ್ಲಿ ಬೆಳೆದು ನಿಂತಿರುವುದನ್ನು ಕಾದಂಬರಿಕಾರರು ಗುರುತಿಸುತ್ತಾರೆ. ಇದು ಎದ್ದುಕಾಣುವ ಮಟ್ಟದಲ್ಲಿ ಹರಿಜನರು ಮತ್ತು ಬ್ರಾಹ್ಮಣರ ನಡುವೆ ಕಾಣುತ್ತದೆ. ಸೂಕ್ಷ್ಮವಾಗಿ ಬ್ರಾಹ್ಮಣರಲ್ಲಿ ಉಪಜಾತಿಗಳಿಗೆ ಸೇರಿದ ರಾಮಣ್ಣ ಪೆರುಮಾಳ್ ಮತ್ತು ಸುಬ್ಬಾಭಟ್ಟರ ನಡುವೆ ಕಾಣಿಸುತ್ತಿದೆ. ಕೇವಲ ಆಚರಣೆಗಳು ಮುಖ್ಯವಾಗಿ ಅವುಗಳ ಹಿಂದಿನ ಆಶಯ ಮತ್ತು ಒಟ್ಟು ತತ್ವ ಮೂಲೆಗುಂಪಾಗಿ ಕರ್ಮಠತೆಯೇ ಮೇಲುಗೈ ಸಾಧಿಸಿರುವುದನ್ನು, ಆನಂದ ಅಗ್ರಹಾರದ ಬ್ರಾಹ್ಮಣರಿಗೆ ತಳಸಮುದಾಯ ಕುರಿತಂತೆ ಅವರ ಆಚಾರ್ಯರಾದ ರಾಮಾನುಜಾರ ಮತವೇನು

ಎಂದು ತಿಳಿಸಿದಾಗ ಅಲ್ಲಿ ಅವರು ತೋರುವ ಅಸಡ್ಡೆ ಮೂಲಕ ಗೊರೂರರು ಚಿತ್ರಿಸಿದ್ದಾರೆ.

ಹೊಲತಿ ಚಿನ್ನಿ ಒಳಗೆ ಹುದುಗಿರುವ ಅಗಾಧ ಪ್ರತಿಭೆಯನ್ನು ಗುರುತಿಸಿದ ಅಗ್ರಹಾರದ ಆನಂದ ಆಕೆಗೆ ಸಂಗೀತಾಭ್ಯಾಸ ಮಾಡಿಸಲು ಹೊರಟಾಗ ಎಲ್ಲರೂ ಜೋರಾಗಿ ವಿರೋಧ ವ್ಯಕ್ತಪಡಿಸಿದ್ದು ಹಿಂಸಾತ್ಮಕ ರೂಪವನ್ನು ಪಡೆಯುತ್ತದೆ. ಈ ಸಂದರ್ಭದಲ್ಲಿ ಬರುವ ಕೆಲವು ವಿಷಯಗಳು ನಿಜರೂಪದ ದರ್ಶನವಾಗುತ್ತದೆ. ಮಂತ್ರವನ್ನು ಬಹಿರಂಗ ಪಡಿಸುವುದರಿಂದ ತನ್ನೊಬ್ಬನಿಗೆ ನರಕವಾದರೂ ಚಿಂತೆಯಿಲ್ಲ ಉಳಿದವರಿಗೆಲ್ಲ ಮೋಕ್ಷ ದೊರೆತರೆ ಸಾಕು ಎಂದು ಗುರುವಿನ ಆಜ್ಞೆಗೆ ವಿರೋಧವಾಗಿ ಮಂತ್ರವನ್ನು ಬಹಿರಂಗಪಡಿಸಿದ್ದನ್ನು ಕಾಣಬಹುದು. ಕೊನೆಗೆ ಈ ಲೋಕದಲ್ಲಿ ಇರುವುದು ಎರಡೇ ಜಾತಿ ಪ್ರಬಲರು ಮತ್ತು ದುರ್ಬಲರು, ದುಡಿಯುವವರು ದುಡಿಸಿಕೊಳ್ಳುವವರು, ತುಳಿಯುವವರು ತುಳಿಸಿಕೊಳ್ಳುವವರು ಎಂಬುದು ಈ ಸಾಮಾಜಿಕ ವಾದದ ಜೊತೆಗೆ ಆರ್ಥಿಕ ಆಯಾಮವೂ ಇದೆ. ಜೊತೆಗೆ ನಮ್ಮ ಸಮಾಜದ ಜಾತಿ ಶ್ರೇಣೀಕರಣದಲ್ಲಿ ಎಲ್ಲರೂ ಅವರವರದೇ ಆದ ನೆಲೆಯಲ್ಲಿ ಮೇಲು–ಕೀಳು ಕಲ್ಪನೆಯನ್ನು ಹೊಂದಿದ್ದು ಕೆಳಗಿನವರನ್ನು ತುಳಿಯುವ ಸಂದರ್ಭದಲ್ಲಿ ಹೇಗೆ ಜೊತೆಯಾಗುತ್ತಾರೆ ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಉತ್ತಮರಲ್ಲಿ ಯಾರೊಬ್ಬರಿಗೂ ತಮ್ಮ ಜಾತಿ ಯಾವುದು ಅದರ ತತ್ವವನ್ನು ಹೊಲೆಯರಿಗೂ ನಮಗೂ ಇರುವ ವ್ಯತ್ಯಾಸವೇನು? ಹೊಲೆಯರಿಗೆ ಆನಂದ ಪಾಠ ಹೇಳಿದರೆ ನಮ್ಮ ಜಾತಿ ಏಕೆ ಕೆಡುತ್ತದೆ. ಎಂಬುದು ಗೊತ್ತಿರಲಿಲ್ಲ. ಆದರೆ ಹೊಲೆಯರನ್ನು ಅವರು ಇರುವ ಜಾಗದಲ್ಲಿ ಇಡಬೇಕು ಎಂಬುದರಲ್ಲಿ ಎಲ್ಲರೂ ಒಮ್ಮುಖರಾಗಿದ್ದರು ಎಂಬ ಮಾತು ಇವರ ಒಗ್ಗಟ್ಟು ಎಷ್ಟರ ಮಟ್ಟಕ್ಕೆ ಸೀಮಿತ ಎನ್ನುವುದನ್ನು ಹೇಳುತ್ತದೆ. ಕೊನೆಯಲ್ಲಿ ಸಾಂಸಾರಿಕವಾಗಿ ಹಾಗೂ ಸಾಮಾಜಿಕವಾಗಿ ನೊಂದ ರಾಮಣ್ಣ ಪೆರುಮಾಳರು ದೇಶಾಂತರ ಹೊರಟಾಗ ಒಂದು ಪ್ರದೇಶದ ತಳಸಮುದಾಯದ ಜನರಿರುವರು ಅವರು ನೀಡುವ ಆಹಾರ ಸ್ವೀಕರಿಸುತ್ತೇನೆ ಎಂದಾಗಲೂ ಒಪ್ಪದೇ ಅವರಿಗೆ ಪದಾರ್ಥಗಳನ್ನು ನೀಡಿ ಅಡುಗೆ ಮಾಡಿಕೊಳ್ಳಲು ಆಗ್ರಹಿಸುತ್ತಾರೆ. ಆಗ ಪೆರುಮಾಳ್ ಇದು ಒಂದು ಬಗೆಯ ಅಷ್ಪೃಶ್ಯತೆ ಎಂದು ಚಿಂತಿಸುತ್ತಾರೆ. ಇದು ಪೆರುಮಾಳರನ್ನು ಅವಮಾನಿಸುವ ರೀತಿಯಲ್ಲದಿದ್ದರೂ ಅವಮಾನಿತ ಸಮುದಾಯಕ್ಕೆ ಸಮುದಾಯ ತೋರುವ ಪ್ರತಿರೋಧದ ಬಗ್ಗೆಯೂ ಆಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಇನ್ನೂ ಹೆಣ್ಣನ್ನು ಬದಿಗೆ ತಳ್ಳುವುದರಲ್ಲಿ ಯಾವ ಸಮುದಾಯವು ಭಿನ್ನವಾಗೇನೂ ಇಲ್ಲ, ಅದು ಬ್ರಾಹ್ಮಣರ ಸಮುದಾಯದ ಹೇಮಾವತಿ ಇರಬಹುದು ಅಥವಾ ಹರಿಜನರ ಸಮುದಾಯದ ಚಿನ್ನಿ ಇರಬಹುದು ಅಥವಾ ಲಕ್ಕಿ ಇರಬಹುದು ಹೀಗೆ ಅಸಮಾನತೆಯ ಸೂಕ್ಷ್ಮ ಪದರಗಳನ್ನು ವಾಸ್ತವದ ನೆಲೆಗಟ್ಟಿನಲ್ಲಿ ಲೇಖಕರು ಗ್ರಹಿಸಿದ್ದಾರೆ.

ಕಾದಂಬರಿಯಲ್ಲಿ ಪ್ರತಿರೋಧದ ನೆಲೆಗಳನ್ನು ಗಮನಿಸಬಹುದು ಪೆರುಮಾಳ್ ಅವರು ಉದಾರವಾದವನ್ನು ಹೊಂದಿದವರು ಹರಿಜನ ಕಾಳನನ್ನು ಅಂತಃಕರಣದಿಂದ ನೋಡಬಲ್ಲವರು. ಅಂತರ್ಜಾತಿ ವಿವಾಹದ ಪರವಾಗಿ ಇದ್ದವರು. ದಮನಿತ ಸಮುದಾಯದ ಜೊತೆಗೆ ರಾಮಸ್ವಾಮಿ ಮಾಡಿ ರಾಮನವಮಿಯನ್ನು ಅರ್ಥಮಾಡಿಕೊಂಡ ವರು. ಇವರಿಗಿಂತ ಮುಂದೆ ಹೋದ ಇವರ ತಮ್ಮ ಆನಂದ ಹೊಲತಿ ಚನ್ನಿಯ ಅಗಾಧ ಪ್ರತಿಭೆಯನ್ನು ಗುರುತಿಸಿ ಆಕೆಯನ್ನು ಅಭಿನವ ಶಾರದೆಯನ್ನಾಗಿ ರೂಪಿಸುತ್ತಿದ್ದಾರೆ. ಹರಿಜನರ ಕೇರಿಯ ಪಕ್ಕದಲ್ಲಿ ವಾಲ್ಮೀಕಿ ಕುಟೀರವನ್ನು ಸ್ಥಾಪಿಸಿ ಊರ ಜನರನ್ನು ಬೆಸೆಯುವ ಪ್ರಯತ್ನವನ್ನು ಮಾಡುತ್ತಾನೆ ಅಂದಿನ ತಲೆಮಾರಿನ ಸುಬ್ಬಾಭಟ್ಟರ ಮಗ ವಾಸು ಓದು, ಒಡನಾಟದ ಮೂಲಕ ಆದರ್ಶವನ್ನು ಮೈಗೂಡಿಸಿಕೊಂಡವನು. ಇವನು ಅಭಿನವ ಶಾರದೆ

ಕಾಳನ ಮಗಳು ಎಂದು ತಿಳಿದು ಆಕೆಯನ್ನು ಬಾಳ ಸಂಗಾತಿಯನ್ನಾಗಿ ಮಾಡಿಕೊಂಡು ಗ್ರಾಮೋದ್ಧಾರದ ಕೆಲಸದಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ತಂದೆ ಪೆರುಮಾಳ ಜೊತೆಯಲ್ಲಿ ಬೆಳೆದ ಹೇಮಾವತಿ ಸ್ವತಃ ನೊಂದವಳಾಗಿ ನೊಂದ ಜನರ ಸೇವೆಯಲ್ಲಿ ತೊಡಗಿಸಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಒಲ್ಲದ ಮದುವೆಗೆ ಒಡ್ಡಿಕೊಂಡು ಗಂಡನಿಂದ ಬಂಧನಕ್ಕೊಳಗಾಗಿ, ಗಂಡನ ಮನೆಯಿಂದ ತಿರಸ್ಕೃತಳಾದ ಹೇಮಾವತಿ ಕೊನೆಗೆ ತನ್ನ ಮೇಲೆ ಅಧಿಕಾರ ಚಲಾಯಿಸಲು ಬಂದ ಪತಿ ಸುಂದರನ ಅಹಂಕಾರಕ್ಕೆ ಪೆಟ್ಟುಕೊಡುತ್ತಾಳೆ. ಆದರೆ ಕೊನೆಯಲ್ಲಿ ಪಶ್ಚಾತ್ತಾಪದಿಂದ ಬೆಂದು ಬಂದ ಸುಂದರನಿಗೆ ಒಲಿಯುತ್ತಾಳೆ. ಹೆಣ್ಣುಮಕ್ಕಳು ಮದುವೆಯಾಗಲೇ ಬೇಕೇ? ಯಾರಾದಾದೂರೂ ಆಶ್ರಯದಲ್ಲಿ ಯಾಕಿರಬೇಕು? ಎಂದು ಯೋಚಿಸುವಷ್ಟು ಗಟ್ಟಿತನವನ್ನು ತೋರುತ್ತಾಳೆ.

ಗೊರೂರರು ಗುರಿಯಷ್ಟೇ ದಾರಿಯೂ ಮುಖ್ಯ ಎಂಬ ಗಾಂಧಿ ತತ್ವದಲ್ಲಿ ನಂಬಿಕೆ ಇಟ್ಟ ಲೇಖಕರು ಅದನ್ನೇ ಕಾದಂಬರಿಯಲ್ಲಿ ಎತ್ತಿ ಹಿಡಿದಿದ್ದಾರೆ. ರಾಮಣ್ಣನವರು ತಮ್ಮ ಸಜ್ಜನಿಕೆ, ಸಾತ್ವಿಕ ಶಕ್ತಿಯಿಂದಲೇ ಸುಬ್ಬಾಭಟ್ಟ ನಂತಹ ಸಾಧಕರಲ್ಲಿ ಕೀಳರಿಮೆ ಅಪರಾಧಿ ಪ್ರಜ್ಞೆ ಮೂಡಿಸಲು ಶಕ್ತರು ರಾಮನವಮಿಯ ಸಂದರ್ಭದಲ್ಲಿ ಊರ ಹಾರುವರು ರಾಮಣ್ಣ ಪೆರುಮಾಳರನ್ನು ಅವಮಾನಿಸಿದಾಗ ನೊಂದು ಮನೆಗೆ ಬಂದು ಅಲ್ಲೇ ತಮ್ಮ ಗಾನದ ಮೂಲಕ ದೇವರನ್ನು ಪ್ರಾರ್ಥಿಸುತ್ತಾರೆ ಆ ಸಂದರ್ಭದಲ್ಲಿ ಎಲ್ಲ ಜನರು ಮನೆಮುಂದೆ ನೆರೆದ ಸಂದರ್ಭದಲ್ಲಿ ಇದರಿಂದ ಅಸಮಾಧಾನಗೊಂಡ ಜನರು ಅವರ ಮನೆಗೆ ಕಲ್ಲು ಎಸೆಯುತ್ತಾರೆ. ಇವರು ಅಷ್ಟೇ ಶಾಂತಚಿತ್ತರಾಗಿ ಅದನ್ನು ಎದುರಿಸುತ್ತಾರೆ. ಕೊನೆಗೆ ತಮ್ಮ ಕೃತ್ಯದಿಂದ ವೈದಿಕರಿಗೆ ನಾಚಿಕೆಯಾಯಿತು. ನಾಯಿ ಬಾಲ ಮುದುರಿಕೊಂಡು ಹೋಗುವಂತೆ ಅವರು ತಮ್ಮ ತಮ್ಮ ಮನೆಗಳಿಗೆ ಹೋದರು ಎಂಬ ಸಾಲು ಸಾತ್ವಿಕ ಪ್ರತಿರೋಧದ ಶಕ್ತಿಯನ್ನು ತೋರುತ್ತದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶ ಎಂದರೆ ಬದಲಾವಣೆ ನಿಧಾನಗತಿಯಲ್ಲಿ ನಡೆಯಬೇಕಾದದ್ದು ಎಂಬ ನಂಬಿಕೆ ಆನಂದ ವಾಲ್ಮೀಕಿ ಕುಟಿರ ಆರಂಭಿಸಿದ ಸಂದರ್ಭದಲ್ಲಿ ದೇವಸ್ಥಾನದ ಪ್ರವೇಶ ಬಯಸಿ ಜನರು ಸಭೆ ಸೇರಿ ಹಕ್ಕೊತ್ತಾಯ ಮಾಡಿಸುತ್ತಾರೆ ಸಭೆಯ ಬಳಿಕ ಪಾನಮತ್ತರಾಗಿ ಅಸ್ತಿತ್ವ ಕಳೆದುಕೊಂಡು ದೇವಸ್ಥಾನ ಪ್ರವೇಶಿಸಲು ಹೊರಟಾಗ ರಕ್ತಪಾತವೇ ಆಗುವ ಸಂಭವ ಉಂಟಾಗುತ್ತದೆ. ಆನಂದ, ಹೇಮಾವತಿ, ಗಾನ ಶಾರದೆ, ವಾಸು, ಸುಂದರ ಇವರ ಸಮಯ ಪ್ರಜ್ಞೆಯಿಂದಾಗಿ ತಪ್ಪುತ್ತದೆ. ಇಲ್ಲಿ ಬದಲಾವಣೆ ಒಮ್ಮಿಂದೊಮ್ಮೆಗೆ ಘಟಿಸುವುದಿಲ್ಲ ಹಂತಹಂತವಾಗಿ ನಡೆಯಬೇಕಾದದ್ದು ಎಂಬ ತಿಳಿವಳಿಕೆಯಿದೆ ವಿರೋಧಿಗಳ ಮನೋಭಾವ ಬದಲಾಯಿಸುವವರೆಗೆ ಕಾಯಬೇಕು ಎಂಬ ಆನಂದನ ಅಭಿಪ್ರಾಯದ ಮೂಲಕ ಇಲ್ಲಿ ವ್ಯಕ್ತವಾಗುವ ನಿಲುವನ್ನು ಗ್ರಹಿಸಬಹುದಾಗಿದೆ. ಇದು ಗಾಂಧಿವಾದದ ಶಕ್ತಿಯೂ ಹೌದು ಜೊತೆಗೆ ನಮ್ಮ ಕಠಿಣ ಸಾಮಾಜಿಕ ಸಂದರ್ಭದಲ್ಲಿ ವಿಮರ್ಶೆಗೆ ಒಳಪಡಬೇಕಾದ ಸಂಗತಿಯೂ ಹೌದು ಏಕೆಂದರೆ ವಿರೋಧಿಗಳ ಮನಃಪರಿವರ್ತನೆಗೆ ಕಾದು ಕೂತರೆ ನಮ್ಮಲ್ಲಿರುವ ಎಷ್ಟು ಸಮಸ್ಯೆಗಳು ಪರಿಹಾರವನ್ನು ಕಂಡಿಲ್ಲ. ಕಾನೂನು ಚಳುವಳಿ ಒತ್ತಾಯಗಳು ಇಲ್ಲದೆ ಹೋದಲ್ಲಿ ಶತಮಾನಗಳ ಕಾಲ ಬದಲಾವಣೆ ಎಷ್ಟು ಸಂದರ್ಭಗಳಲ್ಲಿ ಇವೆ.

ಗ್ರಾಮದ ಸಾಂಸ್ಕೃತಿಕ ಕೇಂದ್ರ ಕಾವೇರಿ ಅಗ್ರಹಾರದಿಂದ ಹರಿಜನ ಕೇರಿಯ ಬಳಿಯಿರುವ ವಾಲ್ಮೀಕಿ ಕುಟೀರಕ್ಕೆ ಪಲ್ಲಟಗೊಳ್ಳುವುದು ಕಾದಂಬರಿಯ ದೃಷ್ಟಿಯಿಂದ ಮಹತ್ವವಾದುದು. ಮದರಾಸಿನಲ್ಲಿ ಚೆನ್ನಿಯನ್ನು ಗಾನ ಶಾರದೆಯಾಗಿ ಕಡೆಯುವ ತಪಸ್ಸಿನಲ್ಲಿ ನಿರತನಾದನು ಆನಂದ. ಅದು ಸಾಕಾರಗೊಂಡ ಬಳಿಕ ಮತ್ತೆ ಗ್ರಾಮದಲ್ಲಿ

ನೆಲೆಗೊಂಡು ಆ ಮೂಲಕ ಕಾರ್ಯಕ್ಷೇತ್ರ ವಿಸ್ತರಿಸಿಕೊಳ್ಳುವ ಹಂಬಲದಿಂದ ಗಾನ ಶಾರದೆ ವಾಸು ಹೇಮಾವತಿಯರೊಂದಿಗೆ ಮರಳುತ್ತಾನೆ. ಆಗ ಅವರು ಗ್ರಾಮದ ಹೊರಗೆ ಹರಿಜನರ ಕೇರಿಯ ಬಳಿ ಕುಟೀರವನ್ನು ನಿರ್ಮಿಸಿಕೊಂಡು ಕಲೆಯ ಆರ್ಥಿಕ ಅಭಿವೃದ್ಧಿ ರಕ್ಷಣೆ ಜ್ಞಾನ ಪ್ರಚಾರ ಹೀಗೆ ಹಲವು ಬಗೆಯ ರಚನಾತ್ಮಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಅಗ್ರಹಾರದ ಸಂಸ್ಕೃತಿಯ ಕೇಂದ್ರ ನಿಧಾನವಾಗಿ ಅಗ್ರಹಾರದ ಮುಖ್ಯ ಬೀದಿಯಿಂದ ವಾಲ್ಮೀಕಿ ಕುಟೀರಕ್ಕೆ ಬರತೊಡಗಿತು ಎಂಬ ಮಾತಿನಲ್ಲಿ ಈ ಪಲ್ಲಟ ವ್ಯಕ್ತವಾಗುತ್ತದೆ. ಉತ್ತಮ ಎನಿಸಿಕೊಂಡವರು ಹಿಂಜರಿಯುತ್ತಿದ್ದ ಹರಿಜನ ಕೇರಿ ಎಲ್ಲರನ್ನು ಸೆಳೆಯುವ ತಾಣವಾಗುತ್ತದೆ. ಬದಲಾಗುತ್ತದೆ ಹೀಗೆ ಮಾಡುವ ಮೂಲಕ ಜನರ ಮನಸ್ಸಿನಲ್ಲಿದ್ದ ತಾರತಮ್ಯದ ಅರ್ಥಹೀನತೆಯನ್ನು ಮನಗಾಣಿಸುವ ಕೆಲಸ ಇಲ್ಲಿ ನಡೆಯುತ್ತದೆ. ಜೊತೆಗೆ ಯಾವುದನ್ನು ನಾವು ಶ್ರೇಷ್ಠ ಎಂದುಕೊಂಡಿದ್ದೇವೆ ಅದರಲ್ಲಿನ ಹುಳುಕನ್ನು ಕಾಣಿಸುವುದು ಕೂಡ ಮುಖ್ಯ. ಇದು ಎಲ್ಲಾ ಕಡೆಯಲ್ಲಿಯೂ ಎಲ್ಲರಲ್ಲಿಯೂ ಉತ್ತಮ ಸಂಗತಿಗಳು ಇರಲು ಸಾಧ್ಯ ಎಂಬುದನ್ನು ಗೊರೂರರು ಮನಗಾಣಿಸಿದ್ದಾರೆ.

ಕಾದಂಬರಿಯಲ್ಲಿ ಮಹಾತ್ಮ ಗಾಂಧೀಜಿಯವರ ಪತ್ನಿ ಕಸ್ತೂರಿಬಾ ಅವರ ಪಾತ್ರವೂ ಮುಖ್ಯವಾಗುತ್ತದೆ. ಅವರು ಸ್ತ್ರೀಯರಿಗೆ ಗಂಡನ ಪ್ರೇಮ ಮಕ್ಕಳ ಪ್ರೇಮ, ಬೇಕೇ ಬೇಕು. ನಿಮ್ಮ ಜನರಲ್ಲಿ ಕನಿಕರವುಳ್ಳವರನ್ನು ಮದುವೆಯಾಗು. ಆಗ ನಿಮ್ಮ ದಾಂಪತ್ಯ ಜೀವನವೂ ನಡೆಯುವುದು, ಸಮಾಜ ಸೇವೆಯೂ ಆಗುವುದು. ಗಾನಶಾರದೆ ಏನೂ ಅರಿಯದ ಸರಳವಾದ ಹಳ್ಳಿಯ ಹೊಲೆಯರ ಹುಡುಗಿ. ಅವಳ ಜೀವ ಬೆಳೆಯಬೇಕಾದರೆ ಅರಳ ಬೇಕಾದರೆ ಪ್ರೇಮ ಕನಿಕರಗಳಿರಬೇಕು. ಒಂದು ಬಿರುನುಡಿಯಾದರೂ ಅವಳು ಬಾಡುತ್ತಾಳೆ. ಇದನ್ನು ನಾನು ಬಹು ವರುಷಗಳ ಹಿಂದೆಯೇ ಕಂಡುಕೊಂಡೆ. ಅನೇಕ ಯುಗಗಳ ಕ್ರೌರ್ಯ ತುಳಿತಗಳಿಂದ ಈಕೆ ಹೀಗಾಗಿದ್ದಾಳೆ ಎನ್ನುತ್ತಾರೆ. ಆಗ ಹಳ್ಳಿಗೆ ಹಿಂದಿರುಗೋಣ, ಅಲ್ಲಿ ನಾವೂ ಎಲ್ಲರಂತೆ ಸಂಸಾರ ಜೀವನವನ್ನು ನಡೆಸೋಣ' ಎಂದು ಆನಂದನು ಹೇಮಾವತಿ ಮತ್ತು ಗಾನಶಾರದೆಯನ್ನು ಕುರಿತು ಹೇಳಿದುದು, ಹಳ್ಳಿಯ ಜೀವನ ಜಾತಿವ್ಯವಸ್ಥೆ ಕಸ್ತೂರಿ ಬಾ ಅವರ ಧೋರಣೆ, ಬೋಧನೆ ಎಲ್ಲದರ ನಿದರ್ಶನವಾಗಿ ಕಂಡುಬರುತ್ತದೆ.

ಒಟ್ಟಿನಲ್ಲಿ ಹೇಮಾವತಿ ಕಾದಂಬರಿಯ ಕೇಂದ್ರಪ್ರಜ್ಞೆ ಹಾಗೂ ಚಿಂತನೆ ಹರಿಜನ ಹೆಣ್ಣೊಂದು ತನ್ನ ಎಲ್ಲ ಅರ್ಹತೆ ಮತ್ತು ಸಂಸ್ಕಾರದೊಡನೆ, ಸಾಂಸ್ಕೃತಿಕವಾಗಿ ಮೇಲ್ವರ್ಗದ ಜಾತಿಯ ಗಂಡನೊಂದಿಗಿನ ಸಂಬಂಧ, ಜಾತಿ ಬದುಕಿನಿಂದ ಹೊರಬರಲು ದಿಕ್ಕುಕಾಣದೆ ಪರಿತಪಿಸುವ ಪಾತ್ರಗಳು, ಅನಂತರದಲ್ಲಿ ಗಾಂಧಿಜೀವನ ಚಿಂತೆಯೇ ಪ್ರವೇಶವಾಗುತ್ತದೆ. ಈ ದೃಷ್ಟಿಯಿಂದ ಸಮಾಜದ ಅತ್ಯಂತ ಕೆಳವರ್ಗದ ಧ್ವನಿಯಾಗಿ ಕಾದಂಬರಿ ವಿಶೇಷತೆಯನ್ನು ಪಡೆದಿದೆ.

**ಪರಾಮರ್ಶನ ಗ್ರಂಥಗಳು**


- ಗೊರೂರು ರಾಮಸ್ವಾಮಿ ಅಯ್ಯಂಗಾರ್. (2016). ಹೇಮಾವತಿ ಕಾದಂಬರಿ (ಆರನೇ ಮುದ್ರಣ). ಐಬಿಎಚ್ ಪ್ರಕಾಶನ.
- ಹಾ.ಮಾ ನಾಯಕ್, (1973). *ಗೊರೂರು ಗೌರವ ಗ್ರಂಥ.* ಗೊರೂರು ಗೆಳೆಯರ ಬಳಗ, ಮೈಸೂರು ವಿಶ್ವವಿದ್ಯಾನಿಲಯ
- ನಾಗರಾಜಪ್ಪ ಕೆ.ವಿ. *ಗೊರೂರು ಸಾಹಿತ್ಯದಲ್ಲಿ ಗ್ರಾಮಸಮಾಜ.* ಯದುಕುಲಪ್ರಕಾಶನ
- ವೆಂಕಟಯ್ಯ, ಸಿ.ಜಿ. *ಗೊರೂರು ರಾಮಸ್ವಾಮಿ ಅಯ್ಯಂಗಾರ್ ವ್ಯಕ್ತಿ ಪರಿಚಯ.* ಜನಪ್ರಿಯ ಜಾನಪದ ಪುಸ್ತಕ ಮಾಲೆ, ಕರ್ನಾಟಕ ಜಾನಪದ ಪರಿಷತ್ತು.